

ಇರುವುದು ಮಾತ್ರ ಹುಡುಗನಂತೆ' ಎಂದು ಹೇಳಿ ನನ್ನಲ್ಲಿ ಗಲಿಬಿಲಿ ಮೂಡಿಸಿದರು. ನಾನು ಇನ್ನು ಹೆಚ್ಚು ವಿಚಾರಣೆ ಮಾಡುವುದು ಅಪಾಯವೆಂದು ಅರಿತು ಸುಮ್ಮನಾಗಿ ಬಿಟ್ಟೆ.

ಮುಂದಿನ ಹುಡುಕಾಟ ನಾವು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದ ರೆಡ್ ಹೆಡೆಡ್ ಟ್ರೋಗನ್ ಪಕ್ಷಿಯದ್ದು. ಕರ್ನಾಟಕದಲ್ಲಿರುವ ಟ್ರೋಗನ್ ಪಕ್ಷಿಯ ಬಣ್ಣ ನೋಡಿ ನಲಿದಿದ್ದ ನಮಗೆ ಅದಕ್ಕಿಂತಲೂ ಮಿಗಿಲಾದ ಕಡುಗೆಂಪು ಬಣ್ಣದ ಟ್ರೋಗನ್ ನೋಡುವ ಆಸೆ ತುಂಬಾ ಇತ್ತು. ಮುಂದಿನ ಒಂದು ದಿನ ನಾವು ಇದೊಂದು ಪಕ್ಷಿಯನ್ನು ಹುಡುಕುವ ಕಾಯಕಕ್ಕೆ ಸೀಮಿತಗೊಂಡೆವು. ಮೊದಲಿನ ಎರಡು ಪಕ್ಷಿಗಳ ಜಾಗ ಗೊತ್ತಿದ್ದ ಕಾರಣ ಬೇಟೆ ಸಲೀಸಾಗಿ ನಡೆದಿತ್ತು. ಆದರೆ ಇದು ಹಾಗಲ್ಲ. ಹುಡುಕುತ್ತಾ ಕಾಡಿನಲ್ಲಿ ಅಲೆದಾಡುವ ರಿಸ್ಕ್ ತೆಗೆದುಕೊಳ್ಳಬೇಕಿತ್ತು.

ಹಳ್ಳಿಯಿಂದ ಐದಾರು ಕಿಲೋಮೀಟರ್ ಕಾರಿನಲ್ಲಿ ಹೋಗಿ ಒಂದು ತಿರುವಿನಲ್ಲಿ ಇಳಿದೆವು. ಅಲ್ಲಿ ಹರಿಯುವ ಹಳ್ಳದ ಆಸುಪಾಸಿನಲ್ಲಿ ಈ ಟ್ರೋಗನ್ ಪಕ್ಷಿಯನ್ನು ಹುಡುಕಬೇಕಿತ್ತು. 'ಇಲ್ಲಿ ಮಾತ್ರ ಕಾಣಲು ಸಿಗುವುದೆಂದು. ಅದೃಷ್ಟ ಇದ್ದರೆ ಮಾತ್ರ ಸಾಧ್ಯವಾಗುವುದೆಂದು. ಈ ಪಕ್ಷಿ ನೋಡಲು ಪಶ್ಚಿಮ ಬಂಗಾಳದಿಂದ ಅನೇಕರು ಬಂದು ಎರಡು ಮೂರು ದಿನಗಳಿಂದ ಇಲ್ಲೇ ಅಲೆಯುತ್ತಿದ್ದಾರೆಂದು ರಂಟೂ ಹೇಳಿದ. ಸಣ್ಣಶಬ್ದ ಕೂಡ ಮಾಡದೆ ಧ್ಯಾನಸ್ಥ ಸ್ಥಿತಿಯಲ್ಲಿ ಕೂತು ಅದರ ಚಲನವಲನಗಳನ್ನು ಗಮನಿಸಿ ಎಂದ. ನಮ್ಮ ಅದೃಷ್ಟಕ್ಕೆ ಆ ದಿನ ಮಧ್ಯಾಹ್ನ ಟ್ರೋಗನ್ ಒಂದು ಕಡೆ ಗೂಡು ಕಟ್ಟುತ್ತಿರುವ ವಿಷಯ ಪತ್ತೆ ಹಚ್ಚಲಾಯಿತು. ಅದು ತೀರ ಎತ್ತರದ ಪ್ರದೇಶದಲ್ಲಿ ಒಣಗಿದ ಮರವನ್ನು ಬಳಸಿಕೊಂಡು ಅದರಲ್ಲಿ ತೂತು ಕೊರೆದು ಗೂಡು ಮಾಡಿತ್ತು. ನಾವು ಗೂಬೆಗಳಂತೆ ಕತ್ತೆತ್ತಿ ಅದರ ಗೂಡನ್ನು ನೋಡುತ್ತಾ ನಿಲ್ಲಬೇಕಿತ್ತು. ಅದು ಅಲ್ಲಿಗೆ ಬಂದೇ ಬರುವುದೆಂದು ಈಗಷ್ಟೇ ಗೂಡು ಕಟ್ಟುವ ಕೆಲಸ ಶುರು ಮಾಡಿದೆ ಎಂದೂ ರಂಟೂ ಹೇಳಿದ. ಕಾಯುತ್ತಾ, ನಿದ್ದೆ ಬಂದು ತೂಕಡಿಸಿದಾಗ ಒಮ್ಮೆ ಹೆಣ್ಣು ಪಕ್ಷಿ ಬಂದು ಹೋಯಿತು ಎಂದು ಎಚ್ಚರಿಸಿದರು. ಗಂಡಿನ ಸುಳಿವು ಇರಲೇ ಇಲ್ಲ. ಹೆಣ್ಣು ಕೂಡ ಸುಂದರವೇ ಆದರೂ ಗಂಡಿನಷ್ಟು ಖಂಡಿತ ಅಲ್ಲ. ಟ್ರೋಗನ್ ಸಾಧಾರಣವಾಗಿ ಬೆಳಕಿರುವ ಕಡೆ ಬಂದು ಕೂರುವುದು ಕಡಿಮೆ. ಅದು ಕತ್ತಲಲ್ಲಿ ಇಲ್ಲವೇ ನೆರಳಿರುವ ಜಾಗದಲ್ಲಿ ಮರದ ಮರೆಯೊಳಗೇ ಬಚ್ಚಿಟ್ಟುಕೊಂಡಿರುವ ಸ್ವಭಾವದ ಪಕ್ಷಿ. ಹಾರಿದಾಗ ಅದರ ಗಟ್ಟಿ ವರ್ಣಗಳಿಂದ ಗಮನ ಸೆಳೆಯುತ್ತದೆ. ಆ ಒಂದು ದಿನ ಅದರ ಮುಖ ದರ್ಶನಕ್ಕಾಗಿ ನಾವು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಟ್ರೈಪಾಡ್‌ಗಳನ್ನು ಎತ್ತಿಕೊಂಡು ಶತಪಥ ಓಡಾಡಿದೆವು. ಒಮ್ಮೆ ಬೆಟ್ಟದ ಮೇಲಕ್ಕೂ, ಮತ್ತೊಮ್ಮೆ ಬೆಟ್ಟದ ಕೆಳಗೂ ಹುಚ್ಚನಂತೆ ಓಡಾಡುತ್ತಿದ್ದ ಆ ಕಾಕರಣೆ ಪಕ್ಷಿ ನೆಟ್ಟಗೆ ಕೂರದೆ ಸತಾಯಿಸಿತು. ನಮ್ಮ ದುಃಸ್ಥಿತಿ ನೋಡಿದ ರಂಟೂ ನೀವಿಲ್ಲಿ ಕೂತಿರಿ. ಕಂಡರೆ ನಾನು ಶಿಳ್ಳೆ ಹಾಕುತ್ತೇನೆ. ನೀವು ತಕ್ಷಣ ಬಂದು ಬಿಡಿ ಎಂದು ಹೇಳಿ ಹಳ್ಳದ ಸಾಲಲ್ಲಿ ಇಳಿದು ಹೋದನು. ●